# ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Note:** The lyrics given in the book mentioned in Ref. 2 above are almost similar to that of the singer. They are given without highlights. But the lyrics are different in the book mentioned in Ref. 1 above. They are given separately in green highlights.
4. **Note:** The Ankita are different in both the books. We have considered book in Ref.1 as standard and taken that Ankita for listing.

ರಾಗ: ಕಾಂಬೋಧಿ ತಾಳ: ಝಂಪೆ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ || ಪ ||
ಪದುಮನಾಭನ ಪಾದ ಭಜನೆ ಸುಖವಯ್ಯ || ಅಪ ||

ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಿ ಇರಬೇಕು ಬಲ್ಲವರೊಳಗೆ
ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಬಂಧು ಜನರೊಳಗೆ || ೧ ||

ಬುದ್ಧಿಯಲಿ ತನು ಮನವ ತಿದ್ದಿಕೊಳುತಿರಬೇಕು
ಮುದ್ದಾಗಿ ಇರಬೇಕು ಮುನಿ ಯೋಗಿಗಳಿಗೆ
ಮಧ್ವ ಮತಾಬ್ಧಿಯಲಿ ಮೀನಾಗಿ ಇರಬೇಕು
ಶುದ್ಧನಾಗಿರಬೇಕು ಕರಣ ತ್ರಯಂಗಳಲಿ || ೨ ||

ವಿಷಯ ಭೋಗದ ತೃಣಕೆ ಉರಿಯಾಗಿ ಇರಬೇಕು
ನಿಶಿ ಹಗಲು ಶ್ರೀ ಹರಿಯ ಭಜಿಸಬೇಕು
ವಸುಧೆಯೊಳು ಪುರಂದರ ವಿಠಲನ ನಾಮವ
ಹಸನಾಗಿ ನೆನೆ ನೆನೆದು ಸುಖಿಯಾಗಬೇಕು || ೩ ||

**Note:** The lyrics are as per the book in Ref. 1 above. As there are lot of differences, they are given separately in green highlights as below:

ರಾಗ: ಕಾಂಬೋಧಿ ತಾಳ: ಝಂಪೆ

ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ || ಪ ||
ಪದುಮನಾಭನ ಪಾದ ಭಜನೆ ಸುಖವಯ್ಯ || ಅಪ ||

ಕಲ್ಲಾಗಿ ಇರಬೇಕು ಕಠಿಣ ಭವ ತೊರೆಯೊಳಗೆ
ಬಿಲ್ಲಾಗಬೇಕು ಬಲ್ಲವರ ಒಳಗೆ
ಮೆಲ್ಲನೆ ಮಾಧವನ ಮನವ ಮೆಚ್ಚಿಸಬೇಕು
ಬೆಲ್ಲವಾಗಿರಬೇಕು ಭಕುತ ಜನರೊಳಗೆ || ೧ ||

ಬುದ್ದಿಯಲಿ ತನ್ನ ಮನ ತಿದ್ದುತ್ತಲಿರಬೇಕು
ಮುದ್ದಾಗ ಬೇಕು ಮುನಿ ಯೋಗಿಗಳಿಗೆ
ಮಧ್ವ ಮತಾಬ್ಧಿಯೊಳು ಮೀನಾಗಿ ಇರಬೇಕು
ಶುಧ್ದ ಭಕುತಿಯ ಸುಕೃತ ಉಣಲು ಬೇಕು || ೨ ||

ವಿಷಯ ಭೋಗದ ತೃಣಕೆ ಉರಿಯಾಗಿ ಇರಬೇಕು
ಕುಶಲದಲಿ ಶ್ರೀ ಹರಿಯ ನೆನೆಯ ಬೇಕು
ವಸುಧೆಯೊಳು ನಮ್ಮ ಶ್ರೀ ಪುರಂದರ ವಿಠ್ಠಲನ
ಹಸನಾಗಿ ನೆನೆ ನೆನೆದು ಸುಖಿಯಾಗ ಬೇಕು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಬದುಕಿನ ವಿವಿಧ ರಂಗಗಳಲ್ಲಿ ಹೇಗೆ ವರ್ತಿಸಬೇಕು ಎಂಬುದರ ಸೋದಾಹರಣ ನಿರೂಪಣೆ ಇಲ್ಲಿದೆ. ಬದುಕಿನ ಸವಾಲುಗಳ ಪ್ರವಾಹದಲ್ಲಿ ಕೊಚ್ಚಿಹೋಗದೆ ಕಲ್ಲಿನಂತೆ ಸ್ಥಿರವಾಗಿ ಕಾಲೂರಿ ನಿಲ್ಲಬೇಕು. ಸುತ್ತಮುತ್ತಣ ಜನತೆಯ ಮಧ್ಯೆ ಇದ್ದಾಗ ಬಿಲ್ಲಾಗಿ ಇರಬೇಕು. ಅಂದರೆ ಬಿಲ್ಲಿನಂತೆ ಬಾಗುವ ವಿನಯ ಶೀಲ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಕಾಮವೆಂಬ ಹುಲ್ಲಿನ ಪಾಲಿಗೆ ಬೆಂಕಿಯಾಗಬೇಕು. ಸದಾ ತನ್ನ ಮನಸ್ಸು ದೇಹಗಳನ್ನು ಪರಿಷ್ಕರಿಸುತ್ತಲೇ ಇರಬೇಕು.

**ಮತಾಬ್ಧಿ** – ಮತವೆಂಬ ಸಮುದ್ರ.

**ತೃಣ** – ಹುಲ್ಲು.

**ನಿಶಿ** – ರಾತ್ರಿ.

**ಕರಣ ತ್ರಯ** – ತ್ರಿಕರಣ; ಮನಸ್ಸು, ವಾಕ್, ಕಾಯ.

**ವಸುಧೆ** – ಭೂಮಿ.

**ಬಿಲ್ಲಾಗು** = ನಮ್ರನಾಗು

**ಬೆಲ್ಲವಾಗಿರಬೇಕು** = ಸೌಜನ್ಯವುಳ್ಳವನಾಗಿರಬೇಕು

**ಬುದ್ದಿಯಲಿ** = ತತ್ವ ಶೀಲವಾದ ತರ್ಕದಿಂದ

**ಮುದ್ದಾಗು** = ಮನಸ್ಸುನ್ನು ಮೆಚ್ಚಿಸು

**ಮಧ್ವ ...... ಮೀನಾಗಿ ಇರಬೇಕು** = ಮಧ್ವ ಮಠದ ತತ್ವವನ್ನು ಸಂಪೂರ್ಣವಾಗಿ ತಿಳಿದವನಾಗ ಬೇಕು

**ಸುಕೃತ** = ಪುಣ್ಯ

**ವಿಷಯ ...... ಇರಬೇಕು** = ವಿಷಯಗಳನ್ನು ಪೂರ್ಣವಾಗಿ ಬಿಟ್ಟುಬಿಡ ಬೇಕು

**ಕುಶಲದಲಿ** = ಜ್ಞಾನವುಳ್ಳವನಾಗಿ

**Classification:** Keerthane
**Ankita:** sri purandara vittala
**Location:** NA
**Category:** jeevanoddhara, jeevana sutra,
**Group Words:** Bhagya, kallu, billu, Madhava, bella, bandhu, buddi, yogi, madhva, Krishna, bhumi, sukha,
**Pravachana:** NA
**Explanation:** NA